MARCH 25, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- 'ಗೃಹ ಆರೋಗ್ಯ ಯೋಜನೆ'; ಏಪ್ರಿಲ್‌ನಲ್ಲಿ ರಾಜ್ಯಾದ್ಯಂತ ಜಾರಿಗೆ – ಸಚಿವ ದಿನೇಶ ಗುಂಡೂರಾವ್.
- ವಿಶೇಷಚೇತನರಿಗೆ ಮೀಸಲಾತಿ ಹೆಚ್ಚಿಸಲು, ರಾಜ್ಯ ಸರ್ಕಾರದ ಗಂಭೀರ ಚಿಂತನೆ – ಸಚಿವ ಡಿ.ಸುಧಾಕರ.
- ಕೃಷಿಕ್ ಎಗ್ರಿ ಬುಸಿನೆಸ್ ಇನ್‌ಕ್ಯೂಬೇಟರ್; 106 ನವೋದ್ಯಮಗಳು ಕಾರ್ಯಾರಂಭ.
- ಕೇಂದ್ರೀಯ ಕೈಗಾರಿಕಾ ರಕ್ಷಣಾ ಪಡೆ, ಸಂಸ್ಥಾಪನಾ ಸಂಭ್ರಮ; ಕಾರವಾರದಲ್ಲಿ ಇಂದು, ಪ್ರಾತ್ಯಕ್ಷಿಕೆ.

<><><>

ಈಗ ವಾರ್ತೆಗಳ ವಿವರ

<><><>

'ಗೃಹ ಆರೋಗ್ಯ ಯೋಜನೆ', ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿದ್ದು, ಉತ್ತಮ ಸ್ಪಂದನೆ ವ್ಯಕ್ತವಾದ ಹಿನ್ನೆಲೆ, ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ, ರಾಜ್ಯಾದ್ಯಂತ ಜಾರಿಗೊಳ್ಳಲಿದೆ ಎಂದು ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಗ್ರಾಮೀಣ ಭಾಗದ ಜನರ ಆರೋಗ್ಯ ರಕ್ಷಣೆಯಲ್ಲಿ ಗೃಹ ಆರೋಗ್ಯ ಯೋಜನೆ ದೊಡ್ಡ ಬದಲಾವಣೆ ತರಲಿದೆ. ಜನರ ಮನೆ ಬಾಗಿಲಿಗೆ ಆರೋಗ್ಯ ಸಿಬ್ಬಂದಿ ಭೇಟಿ ನೀಡಿ, ರಕ್ತದೊತ್ತಡ, ಮಧುಮೇಹ, ಕ್ಯಾನ್ಸರ್ ಸೇರಿದಂತೆ, ಮಾನಸಿಕ ಕಾಯಿಲೆಗಳ ಬಗ್ಗೆ ತಪಾಸಣೆ ನಡೆಸಲಿದ್ದಾರೆ, ಎಂದಿದ್ದಾರೆ.

<><><>

ಧಾರವಾಡದ ಹಿರಿಯ ವಿಜ್ಞಾನಿ, ಡಾಕ್ಟರ್ ಶಿವಾಜಿ ಕಾಶೀನಾಥ ಜಾಧವ, 'ಆಸ್ಟ್ರೇಲಿಯನ್ ಸೊಸೈಟಿ ಫಾರ್ ಎಚ್.ಐ.ವಿ., ವಾಯರಲ್ ಹೆಪಟೈಟಿಸ್ ಆಂಡ್ ರ‍್ಯಾಪಿಡ್ ಪಾಯಿಂಟ್ ಆಫ್ ಕೇರ್, ರಿಸರ್ಚ್ ಕನ್‌ಸಾರ್ಟಿಯಂ ಫಾರ್ ಇನ್‌ಫೆಕ್ಶಿಯಸ್ ಡಿಸೀಸಸ್' ಕೊಡಮಾಡುವ, ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಎಚ್.ಐ.ವಿ. ಹಾಗೂ ಕ್ಷಯ ರೋಗ ಸಂಬಂಧಿ, ಮೌಲಿಕ ವೈರಾಲಜಿ ಸಂಶೋಧನೆ, ಗಂಭೀರ ಹಾಗೂ ಸಾಂಕ್ರಾಮಿಕ ರೋಗಗಳನ್ನು ಪತ್ತೆ ಹಚ್ಚುವ, ತ್ವರಿತ ಶೋಧನಾ ತಂತ್ರಗಳನ್ನು ಅಭಿವೃದ್ಧಿ ಪಡಿಸುವಲ್ಲಿ, ಡಾಕ್ಟರ್ ಶಿವಾಜಿ ಕೊಡುಗೆಯನ್ನು ಗುರುತಿಸಿ, ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ಡಾಕ್ಟರ್ ಶಿವಾಜಿ ಜಾಧವ.

<><><>

ಡಾ. ಶಿವಾಜಿ ಜಾಧವ್ ಧ್ವನಿ 50 ಸೆಕೆಂದುಗಳು

<><><>

ವಿಶೇಷಚೇತನರಿಗೆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ, ಗಂಭೀರ ಚಿಂತನೆ ರಾಜ್ಯ ಸರ್ಕಾರ ಹೊಂದಿದೆ ಎಂದು, ಯೋಜನೆ ಮತ್ತು ಸಾಂಖ್ಯಿಕ ಖಾತೆ ಸಚಿವ ಡಿ.ಸುಧಾಕರ ತಿಳಿಸಿದ್ದಾರೆ. ಚಿತ್ರದುರ್ಗದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ, ವಿಶೇಷ ಚೇತನರಿಗೆ ಉಚಿತ ಸಾಧನ ಮತ್ತು ಸಲಕರಣೆ ವಿತರಿಸಿ, ಮಾತನಾಡಿದರು. 108 ವಿಧದ ವಿಶೇಷಚೇತನರನ್ನು ಸರ್ಕಾರ ಪಟ್ಟಿ ಮಾಡಿದೆ. ಅವರನ್ನು ಮುಖ್ಯವಾಹಿನಿಗೆ ತರಲು, ಸಾರ್ವಜನಿಕರ ಬೆಂಬಲ ಅಗತ್ಯವಾಗಿದೆ ಎಂದು ಅವರು ಹೇಳಿದರು.

<><><>

ಲೋಕಸಭಾ ಸಂಸದ ಗೋವಿಂದ ಕಾರಜೋಳ ಮಾತನಾಡಿ, 2014 ರಲ್ಲಿ ವಿಕಲಚೇತನರ ಕಾಯ್ದೆಗೆ ತಿದ್ದುಪಡಿ ತಂದು, 21 ಬಗೆಯ ಅಂಗವೈಕಲ್ಯಗಳನ್ನು ಕೇಂದ್ರ ಮಾನ್ಯ ಮಾಡಿದೆ. ಆಸಿಡ್ ದಾಳಿಗೆ ತುತ್ತಾದವರನ್ನು, ದಿವ್ಯಾಂಗರ ಪಟ್ಟಿಯಲ್ಲಿ ಸೇರಿಸಿ, ಸರ್ಕಾರಿ ಉದ್ಯೋಗದಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದರು.

<><><>

ಕೃಷಿ ಕ್ಷೇತ್ರದ ಆಧುನೀಕರಣ ಮತ್ತು ಯಾಂತ್ರೀಕರಣ ತ್ವರಿತ ಗತಿಯಲ್ಲಿದ್ದು, ನವೋದ್ಯಮಗಳಿಗೆ ಹೆಚ್ಚು ಅವಕಾಶವಿದೆ ಎಂದು, ಧಾರವಾಡದ ಮಾಹಿತಿ ತಂತ್ರಜ್ಞಾನ ಸಂಸ್ಥೆ – ಟ್ರಿಪಲ್ ಐಟಿ ನಿರ್ದೇಶಕ ಎಸ್.ಆರ್.ಮಹಾದೇವ ಪ್ರಸನ್ನ ತಿಳಿಸಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, 'ಕೃಷಿಕ್ ಎಗ್ರಿ ಬ್ಯುಸಿನೆಸ್ ಇನ್‌ಕ್ಯೂಬೇಟರ್', ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಹಾಗೂ ಶಿಕ್ಷಣ ಸಚಿವಾಲಯದ, ನಾವಿನ್ಯತೆ ಮತ್ತು ಉದ್ಯಮಶೀಲತೆ ಕಾರ್ಯಾಗಾರದಲ್ಲಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ, ಉಪ ಕುಲಪತಿ ಪಿ.ಎಲ್. ಪಾಟೀಲ ಮಾತನಾಡಿ, ಕೃಷಿಕ್ ಎಗ್ರಿ ಬುಸಿನೆಸ್ ಇನ್‌ಕ್ಯೂಬೇಟರ್, ಈಗಾಗಲೇ 106 ನವೋದ್ಯಮಗಳಿಗೆ, ಅವಕಾಶ ಕಲ್ಪಿಸಿದೆ. 10 ಅಗ್ರಿ ಸ್ಟಾರ್ಟ್ ಅಪ್‌ಗಳನ್ನು ಕೃಷಿ ವಿದ್ಯಾರ್ಥಿಗಳೇ ಮುನ್ನಡೆಸುತ್ತಿದ್ದಾರೆ. 12 ಪೇಟೆಂಟ್ ಗಳಿಸಲಾಗಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ದಾಖಲೆ ಮಟ್ಟಕ್ಕೆ ಏರಿಕೆಯಾಗಿದೆ. ಕಳೆದ ಎರಡು ತಿಂಗಳಲ್ಲಿ, ಗರಿ ್ಠ ಬೇಡಿಕೆ ಅವಧಿ (ಪೀಕ್ ಅವರ್ ಡಿಮಾಂಡ್) ಒಟ್ಟು 18 ಸಾವಿರ ಮೆಗಾ ವ್ಯಾಟ್ ದಾಟಿದೆ. ಏಪ್ರಿಲ್ ತಿಂಗಳಲ್ಲಿ 18 ಸಾವಿರದ 500 ಮೆಗಾ ವ್ಯಾಟ್ ತಲುಪುವ ಸಾಧ್ಯತೆ ಇದೆ ಎಂದು, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಮತ್ತು ಕೆ.ಪಿ.ಟಿ.ಸಿ.ಎಲ್. ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, ಈ ವಿಷಯ ತಿಳಿಸಿದರು.

ರಾಜ್ಯದ ಇತಿಹಾಸದಲ್ಲೇ ಕಳೆದ 7ನೇ ತಾರೀಖು, ಗರಿಷ್ಟ ವಿದ್ಯುತ್ ಬೇಡಿಕೆ 18 ಸಾವಿರದ 395 ಮೆಗಾ ವ್ಯಾಟ್ ತಲುಪಿತ್ತು. ಪ್ರಸ್ತುತ ಗರಿಷ್ಟ ವಿದ್ಯುತ್ ಬಳಕೆ 357 ಮಿಲಿಯನ್ ಯೂನಿಟ್ ಇದೆ ಎಂದು, ಅವರು ಹೇಳಿದರು.

<><><>

ಸುಧರ್ಮಾ ಸಂಸ್ಕೃತ ದಿನ ಪತ್ರಿಕೆ ಹಾಗೂ ಮೈಸೂರಿನ ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ, ಸಂಯುಕ್ತ ಆಶ್ರಯದಲ್ಲಿ, ಸಂಸ್ಕೃತ ಪಾಠ ಶಾಲೆಯಲ್ಲಿ, ಸಂಸ್ಕೃತ ಬರೆಹಗಾರರ ಕಾರ್ಯಾಗಾರ ಜರುಗಿತು. ಹಿರಿಯ ಸಂಸ್ಕೃತ ವಿದ್ವಾಂಸ ಡಾಕ್ಟರ್ ಎಚ್.ವಿ. ನಾಗರಾಜ ರಾವ್ ಕಾರ್ಯಾಗಾರವನ್ನು ಉದ್ಘಾಟಿಸಿದರು. ಮೈಸೂರಿನ ಹಿರಿಯ ಪತ್ರಕರ್ತ ಡಾಕ್ಟರ್ ಕೂಡ್ಲಿ ಗುರುರಾಜ, ಸಂಸ್ಕೃತ ಬರೆಹಗಾರರ ಕಾರ್ಯಾಗಾರದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಕೂಡ್ಲಿ ಗುರುರಾಜ ಧ್ವನಿ 50 ಸೆಕೆಂದುಗಳು

<><><>

ಅಂತರ್ಜಾಲದ ಸರ್ಚ್ ಎಂಜಿನ್, ಗೂಗಲ್ ಧ್ವನಿ ಉದ್ಘೋಷದಲ್ಲಿ, ರಾಜ್ಯದ 72 ಸಾವಿರ ಹಳ್ಳಿಗಳ ಹೆಸರು, ತಪ್ಪು ಉಚ್ಚಾರಗೊಂಡು, ಗೂಗಲ್ ಮ್ಯಾಪ್ ಅನುಸರಿಸುವ'ವರಿಗೆ, ಗೊಂದಲವಾಗುತ್ತಿದೆ; ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸರಿಪಡಿಸಲು ಯೋಜಿಸಿದೆ ಎಂದು, ಪ್ರಾಧಿಕಾರದ ಅಧ್ಯಕ್ಷ ಪುರಷೋತ್ತಮ ಬಿಳಿಮಲೆ ತಿಳಿಸಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದಲ್ಲಿ, ಜಿಲ್ಲೆಯ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಕಂದಾಯ ಇಲಾಖೆ, ಗೂಗಲ್ ಆಡಳಿತ ಸಮಿತಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಮನ್ವಯದೊಂದಿಗೆ ಗ್ರಾಮ ನಾಮಗಳನ್ನು ಸರಿ ಪಡಿಸಲು ಯೋಜನೆ ರೂಪಿಸಲಿದೆ, ಎಂದರು.

<><><>

ಕೇಂದ್ರೀಯ ಕೈಗಾರಿಕಾ ರಕ್ಷಣಾ ಪಡೆ, ಸಂಸ್ಥಾಪನಾ ದಿನದ ಅಂಗವಾಗಿ, ದೇಶದ ಎಲ್ಲ ಕರಾವಳಿ ತೀರಗಳಲ್ಲಿ, ಸೈಕಲ್ ಜಾಥಾ ಆಯೋಜಿತವಾಗಿದೆ. ಉತ್ತರಕನ್ನಡ ಜಿಲ್ಲೆ, ಕಾರವಾರ ಬಳಿ, ಮಾಜಾಳಿ ತನಿಖಾ ಠಾಣೆಗೆ ಆಗಮಿಸಿದ, ಸೈಕ್ಲೋಥಾನ್ ತಂಡದ ಸದಸ್ಯರನ್ನು, ಹಾಲಕ್ಕಿ ಸಮಾಜದ ಸುಗ್ಗಿ ಕುಣಿತದ ಮೆರವಣಿಗೆಯ ಮೂಲಕ ಜಿಲ್ಲಾಡಳಿತ ಸ್ವಾಗತಿಸಿತು. ಸೈಕ್ಲೋಥಾನ್‌ನಲ್ಲಿ, ಸಿ.ಐ.ಎಸ್.ಎಫ್. ಮಹಿಳಾ ಸಿಬ್ಬಂದಿ ಮತ್ತು ಪತ್ರಾಂಕಿತ ಅಧಿಕಾರಿಗಳು ಸೇರಿದಂತೆ, 110 ಸಿಬ್ಬಂದಿ ಭಾಗವಹಿಸಿದ್ದಾರೆ.

<><><>

ಇಂದು ಬೆಳಗ್ಗೆ 7 ಗಂಟೆಗೆ, ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಸಿ.ಐ.ಎಸ್.ಎಫ್. ಸಿಬ್ಬಂದಿ ವಿಶೇಷ ಪ್ರಾತ್ಯಕ್ಷಿಕೆ ನೀಡುತ್ತಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಲಬುರಗಿಯಲ್ಲಿ ಗರಿಷ್ಠ 39 ಡಿಗ್ರಿ ಸೆಲ್ಸಿಯಸ್ ಹಾಗೂ ಧಾರವಾಡದಲ್ಲಿ ಕನಿಷ್ಟ 19 ದಶಾಂಶ 5 ಡಿಗ್ರಿ ತಾಪಮಾನ ದಾಖಲಾಗಿದೆ.

<><><>

ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕಲ್ಪಿಸಲು, ಮುಖ್ಯಮಂತ್ರಿಯವರು, ನ್ಯಾಯಮೂರ್ತಿ ನಾಗಮೋಹನ್ ದಾಸ್ ಹಾಗೂ ಸಂಪುಟ ಸಹೋದ್ಯೋಗಿಗಳ ಜೊತೆ, ಬೆಂಗಳೂರಿನಲ್ಲಿ ವಿಶೇಷ ಸಮಾಲೋಚನಾ ಸಭೆ ನಡೆಸಿದರು.

<><><>

ಬೆಂಗಳೂರಿನ ವಿಧಾನಸೌಧಕ್ಕೆ, ದೀಪಾಲಂಕರಿಸಲಾಗಿದೆ. ಏಪ್ರಿಲ್ ಮೊದಲ ವಾರ ಉದ್ಘಾಟಿಸಲಾಗುವುದು ಎಂದು, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಕಲಬುರಗಿ ಜಿಲ್ಲೆಯ, 2 ಲಕ್ಷ 36 ಸಾವಿರದ 933 ರೈತರಿಗೆ, 667 ಕೋಟಿ 73 ಲಕ್ಷ ರೂಪಾಯಿ, ಬೆಳೆ ಹಾನಿಯ ಪರಿಹಾರ ಮೊತ್ತ ಪಾವತಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

<><><>

ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ, ಹೊರ ರೋಗಿಗಳ ನೂತನ ಕಟ್ಟಡವನ್ನು, ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ ಜಾರ್ಜ್ ಉದ್ಘಾಟಿಸಿದ್ದರು.

<><><>

ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಆಳಂದ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿ, ಕುಡಿಯುವ ನೀರು ಸಮಸ್ಯೆ ಪರಿಶೀಲಿಸಿದರು.

<><><>

ಹಾವೇರಿ ಜಿಲ್ಲೆಯ ಏಳು ತಾಲೂಕುಗಳ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ, ಹಿಂಗಾರು ಹಂಗಾಮಿನ ಜೋಳವನ್ನು, ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು, ಇಂದಿನಿಂದ ರೈತರ ನೋಂದಣಿ ಆರಂಭಿಸಲಾಗುವುದು ಎಂದು, ಜಿಲ್ಲಾಧಿಕಾರಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಗೃಹ ಆರೋಗ್ಯ ಯೋಜನೆ'; ಏಪ್ರಿಲ್‌ನಲ್ಲಿ ರಾಜ್ಯಾದ್ಯಂತ ಜಾರಿಗೆ – ಸಚಿವ ದಿನೇಶ ಗುಂಡೂರಾವ್.
- ವಿಶೇಷಚೇತನರಿಗೆ ಮೀಸಲಾತಿ ಹೆಚ್ಚಿಸಲು, ರಾಜ್ಯ ಸರ್ಕಾರದ ಗಂಭೀರ ಚಿಂತನೆ – ಸಚಿವ ಡಿ.ಸುಧಾಕರ.
- ಕೃಷಿಕ್ ಎಗ್ರಿ ಬುಸಿನೆಸ್ ಇನ್‌ಕ್ಯೂಬೇಟರ್; 106 ನವೋದ್ಯಮಗಳು ಕಾರ್ಯಾರಂಭ.
- ಕೇಂದ್ರೀಯ ಕೈಗಾರಿಕಾ ರಕ್ಷಣಾ ಪಡೆ, ಸಂಸ್ಥಾಪನಾ ಸಂಭ್ರಮ; ಕಾರವಾರದಲ್ಲಿ ಇಂದು, ಪ್ರಾತ್ಯಕ್ಷಿಕೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.